# ಇತಿಹಾಸದ ಪುಟಗಳಿಂದ...

'ಜ್ಯೋತಿಷ್ಮತಿ'



## 'ಆವೃತ್ತಚಕ್ಷು'

ಇತಿಹಾಸವೆಂದರೆ ನಾವು ಏನೆಂದು ಕಲಿಯುತ್ತೇವೆ? ಕಲ್ಲಿನ ಬರಹ, ಹಳೆಯ ಕಟ್ಟಡ, ಸ್ಮಾರಕಗಳು, ಪಳೆಯುಳಿಕೆಗಳು, ನಾಣ್ಯ, ಇತ್ಯಾದಿಗಳು, ಸ್ವಲ್ಪಮಟ್ಟಿಗೆ ಹಳೆಯ ಸಾಹಿತ್ಯ — ಇವುಗಳು ಕಟ್ಟಿಕೊಡುವ ನಮ್ಮ ಹಿಂದಿನ ಚರಿತ್ರೆ – ಎಂದು. ಆದರೆ ಇತಿಹಾಸ ಎಂದರೆ ಇಷ್ಟು ಮಾತ್ರವೆ?

ಯಾವ ದಾಖಲೆಗಳೂ ಸಿಗದೆ, ಇತಿಹಾಸದ ಗರ್ಭದಲ್ಲಿ ಲೀನವಾಗಿ ಹೋದ, ಆದರೆ ಮಾನವನ ಇತಿಹಾಸವನ್ನೇ ಬದಲಾಯಿಸಿದ ಅಜ್ಞಾತ ವ್ಯಕ್ತಿಗಳು ಇರಲಾರರೆ? ತಮ್ಮ ಹೆಸರು, ಕೀರ್ತಿ, ಸಾಧನೆಗಳನ್ನು ಆಚಂದ್ರಾರ್ಕವಾಗಿ ಉಳಿಸಲೆತ್ನಿಸುವ ಅನೇಕ ಮಂದಿ ರಾಜರುಗಳಿಗಿಂತ ಭಿನ್ನವಾಗಿ, ಇಡೀ ಮನುಕುಲದ ಒಳಿತಿಗಾಗಿ, ಶಾಂತಿ–ನೆಮ್ಮದಿಗಾಗಿ ಹಾರೈಸಿದ ಕೆಲವು ಮಹಾತ್ಮರು ಭಾರತದಲ್ಲಿ ಇರಲಿಲ್ಲವೆ? 'ಸಾಕಷ್ಟು ಚಾರಿತ್ರಿಕ ಆಧಾರಗಳಿಲ್ಲ' ಎಂಬ ಇತಿಹಾಸಕಾರರ ಕ್ಲೀಶೆಯ ಮಾತಿನಂತೆ ಅಂತಹ ಮಹಾತ್ಮರ ಅಸ್ತಿತ್ವವನ್ನೇ ಅಳಿಸಿಹಾಕಬೇಕೆ?

— ಇದು ಇಡೀ ಮಾನವಕುಲಕ್ಕೇ ಮಾಡುವ ಅಪಚಾರವಾದೀತು. ಬದಲಾಗಿ, ಪ್ರಾಚೀನ ವೈದಿಕ ಸಾಹಿತ್ಯವು ಕಟ್ಟಿಕೊಡುವ ಅಜ್ಞಾತ 'ಧೀರ' ವ್ಯಕ್ತಿಗಳ ಮಾತನ್ನು ಸೂಕ್ಷ್ಮವಾಗಿ ಗಮನಿಸಿ ನೋಡೋಣ. ಇದರಿಂದ ಆ ವ್ಯಕ್ತಿ ಇಡೀ ಮಾನವ ಇತಿಹಾಸದಲ್ಲಿ ಕಂಡ ಅತ್ಯದ್ಭುತ ಸತ್ಯ ಎಂತಹದು ಎಂಬುದು ಅರ್ಥವಾದೀತು.

**ಪರಾಂಚಿ ಖಾನಿ ವ್ಯತೃಣತ್ ಸ್ವಯಂಭೂಃ**
**ತಸ್ಮಾತ್ ಪರಾಂ ಪಶ್ಯತಿ ನಾಂತರಾತ್ಮನ್ ।**
**ಕಶ್ಚಿದ್ಧೀರಃ ಪ್ರತ್ಯಗಾತ್ಮಾನಮೈಕ್ಷತ್**
**ಆವೃತ್ತಚಕ್ಷುಃ ಅಮೃತತ್ವಮಿಚ್ಛನ್ ॥**

*(ಕಠೋಪನಿಷತ್, ೨.೧.೧)*

ಇದರ ಅರ್ಥ : 'ಸೃಷ್ಟಿಕರ್ತನು ಮಾನವನ ಇಂದ್ರಿಯಗಳು ಹೊರಗೆ ಹೋಗುವಂತೆಯೇ ಅದನ್ನು ರಚಿಸಿ ಹಾನಿಗೈದಿದ್ದಾನೆ. ಆದ್ದರಿಂದ ಅವನು ಹೊರಗೆಯೇ ನೋಡುತ್ತಾನೆ, ಒಳಗಿರುವ ಅಂತರಾತ್ಮನನ್ನು ನೋಡುವುದಿಲ್ಲ. ಯಾರೋ ಒಬ್ಬ ಧೀರನು (ಬುದ್ಧಿವಂತನು) ಸಾವನ್ನು ದಾಟಿಹೋಗಿ ಅಮೃತತ್ವವನ್ನು ಹೊಂದಬಯಸಿ, ತನ್ನ ಕಣ್ಣುಗಳನ್ನು ಒಳಕ್ಕೆ ತಿರುಗಿಸುತ್ತಾನೆ; ಅದರ ಫಲವಾಗಿ ತನ್ನ ಅಂತರಾತ್ಮನನ್ನು ನೋಡುತ್ತಾನೆ.'

ಅಜ್ಞಾತ ಮಹಾತ್ಮನ ಅತಿಶ್ರೇಷ್ಠ ಸಂಶೋಧನೆಯ ಕುರುಹು ಇಲ್ಲಿದೆ. ಅಲ್ಲಿಯವರೆಗೂ ಮಾನವನು ದೇವರನ್ನು ಹೊರ ಪ್ರಪಂಚದಲ್ಲೇ ಹುಡುಕುತ್ತಿದ್ದ. ಮೋಡ, ಪರ್ವತ, ಅಗ್ನಿ, ಬಿರುಗಾಳಿ, ಜಡಿಮಳೆ, ಪ್ರವಾಹ ಇವೆಲ್ಲ ಅವನಿಗೆ ಅಮಾನುಷ ಶಕ್ತಿಯ ಒಂದು ರೂಪವಾಗಿ ಕಾಣಿಸಿತ್ತು. ಈ ಕಾರಣದಿಂದಲೇ ಅವನು ಪ್ರಕೃತಿದೇವತೆಗಳನ್ನು ಪೂಜಿಸತೊಡಗಿದ. ವೇದಗಳಲ್ಲಿ ಕಂಡುಬರುವ ಅನೇಕ ಬಗೆಯ ಆಧ್ಯಾತ್ಮಿಕ ಅನ್ವೇಷಣಗಳ ಫಲವೇ ಈ ರೀತಿಯ ಉಪಾಸನೆಗಳು. ಕ್ರಮೇಣ ಅವನ ಅನ್ವೇಷಣೆ ಮುಂದುವರಿಯಿತು. ಮಾನವ ಅಂತರ್ಮುಖನಾದ. ಏಕಾಂತದಲ್ಲಿ, ತಪಸ್ಸಿನ ಮೂಲಕ ವಿಶ್ವದ ರಚನೆಯ ಹಿಂದಿರುವ ಸತ್ಯಗಳನ್ನು ಕಂಡುಕೊಳ್ಳಲು ಹೊರಟ. ಈ ಆಳವಾದ ಧ್ಯಾನದ ಫಲವಾಗಿ ಮೂಡಿಬಂದ ಸತ್ಯವೇ ಮೇಲಿನ ಮಂತ್ರದಲ್ಲಿ ವ್ಯಕ್ತವಾಗಿದೆ. 'ಎಲ್ಲ ವ್ಯಕ್ತಪ್ರಪಂಚದ ಹಿಂದಿನ ಸತ್ಯ ಹೊರಗಿಲ್ಲ, ಅದು ನನ್ನ ಅಂತರಂಗದಲ್ಲೇ ಇದೆ; ನಾನೇ ಎಲ್ಲ ಸತ್ಯಗಳ ಸತ್ಯ; ನನ್ನೊಳಗೆಯೇ ಆ ಅವ್ಯಕ್ತ ಆತ್ಮವಿದೆ.'

ಇದು ಮಾನವ ವಿಕಾಸದಲ್ಲಿ ಒಂದು ಅತಿದೊಡ್ಡ ಹೆಜ್ಜೆ. ಆಧ್ಯಾತ್ಮಿಕ ಅನ್ವೇಷಣೆಯ ಇತಿಹಾಸದಲ್ಲಿ ಮಹತ್ತರವಾದ ಮೈಲಿಗಲ್ಲು. 'ನಿನ್ನನ್ನು ನೀನು ಅರಿತರೆ ಎಲ್ಲವನ್ನೂ ಅರಿತಂತೆ' ಎಂಬ ವಿಚಾರಕ್ಕೆ ಮೂಲ. ಹೀಗೆ ತನ್ನ ದೃಷ್ಟಿಯನ್ನು ಒಳಕ್ಕೆ ತಿರುಗಿಸಿ ನೋಡಿದ ಮೂಲಪುರುಷನೊಬ್ಬ ಹಿಂದೆ ಇದ್ದಿರಲಾರನೆ? — ನಿಜಕ್ಕೂ ಇದ್ದ; ಆದ್ದರಿಂದಲೇ ಆತ್ಮನ ದರ್ಶನವಾಯಿತು, ಆತ್ಮತತ್ತ್ವದ ಆವಿಷ್ಕಾರವಾಯಿತು. ❀